**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ, ಸೊರಬ**

**ಉಪಸ್ಥಿತರುಃ ಶ್ರೀ ರಾಜು .ಕೃ. ಶೇಡಬಾಳ್‌ಕರ್**
**ಬಿ.ಕಾಂ., ಎಲ್.ಎಲ್.ಬಿ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಸೊರಬ.

ದಿನಾಂಕಃ 17 ನೇ ಜುಲೈ -2026

**ಅಸಲು ದಾವೆ ಸಂಖ್ಯೆ: 249/2025**

**ವಾದಿ** **:** ಮಂಜುಳಮ್ಮ

**- ವಿರುದ್ಧ -**

**ಪ್ರತಿವಾದಿಯರು** **:** ಲಕ್ಷ್ಮಮ್ಮ ಮತ್ತು ಇನ್ನೊಬ್ಬರು

**ಮಧ್ಯಂತರ ಅರ್ಜಿ ಸಂಖ್ಯೆI:**

**ಅರ್ಜಿದಾರರು** ಃ ಮಂಜುಳಮ್ಮ ಕೋಂ ರಾಜು ಮಂಚಿಕಡೇರ್ ಮನೆ
ಸುಮಾರು 48 ವರ್ಷ, ವ್ಯವಸಾಯಗಾರರು,
ವಾಸಃ ಚಗಟೂರು ಗ್ರಾಮ, ಜಡೆ ಹೋಬಳಿ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**(ಶ್ರೀ.ಡಿ.ವಿ.ಕೆ, ವಕೀಲರು)**

**- ವಿರುದ್ಧ -**

**ಎದುರುದಾರರು :** 1. ಲಕ್ಷ್ಮಮ್ಮ ಕೋಂ ಪ್ರಧಾನಪ್ಪ @ ಪ್ರಧಾನಿ ಗಾಜೇರ
ಸುಮಾರು 50 ವರ್ಷ, ಮನೆಕೆಲಸ,
ವಾಸಃ ಲಕ್ಕವಳ್ಳಿ ಗ್ರಾಮ, ಆನವಟ್ಟಿ ಹೋಬಳಿ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

2. ಜಯಮ್ಮ ಕೋಂ ಸುರೇಶ ವಿ
ಸುಮಾರು 47 ವರ್ಷ, ಮನೆಕೆಲಸ,
ವಾಸಃ ಚಗಟೂರು ಗ್ರಾಮ, ಜಡೆ ಹೋಬಳಿ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**(1 ನೇ ಪ್ರತಿವಾದಿಯ ಪರ ಶ್ರೀ.ಬಿ.ಹೆಚ್.ಬಿ., ವಕೀಲರು)**
**(2 ನೇ ಪ್ರತಿವಾದಿಯ ಪರ ಶ್ರೀ.ಡಿ.ಹೆಚ್/ಹೆಚ್.ಎಂ.ಪಿ., ವಕೀಲರು)**

**ವ್ಯವಹಾರ ಪ್ರಕ್ರಿಯೆ ಸಂಹಿತೆ ಆದೇಶ XXXIX ನಿಯಮ 1 ಮತ್ತು 2 ರ ಅಡಿಯಲ್ಲಿ ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ I ರ ಮೇಲಿನ ಆದೇಶ**

ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಪರಿಹಾರಕ್ಕಾಗಿ ಸಲ್ಲಿಸಿರುತ್ತಾರೆ. ವಾದಿಯು ವಾದ ಪತ್ರದೊಂದಿಗೆ ಮಧ್ಯಂತರ ಅರ್ಜಿ ಸಂಖ್ಯೆ.I ಅನ್ನು ಸಲ್ಲಿಸಿ ದಾವೆಯು ಇತ್ಯಾರ್ಥವಾಗುವವರೆಗೆ ದಾವಾ ಶೆಡ್ಯೂಲ್ ಸ್ವತ್ತನ್ನು ಪ್ರತಿವಾದಿಯರು ಕ್ರಯ, ದೀಡು, ಅಡಮಾನ ಇತರೆ ರೀತಿಯಲ್ಲಿ ಪರಭಾರೆ ಮಾಡದಂತೆ ಪ್ರತಿಬಂಧಾಜ್ಞೆ ಆದೇಶವನ್ನು ನೀಡಬೇಕೆಂದು ಕೋರಿರುತ್ತಾರೆ.

**ಶೆಡ್ಯೂಲ್**

ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಜಡೆ ಹೋಬಳಿ, ಚಗಟೂಟು ಗ್ರಾಮದ ಸ.ನಂ.105/3 ರಲ್ಲಿನ 17 ಗುಂಟೆ ತರಿ ಜಮೀನು, ಸದರಿ ಜಮೀನಿನ ಆಕಾರ 2 ರೂ 39 ಪೈಸೆ ಇದಕ್ಕೆ ಚೆಕ್ಕುಬಂದಿಃ- ಪೂರ್ವಕ್ಕೆಃ ಸ.ನಂ.104 ರ ಅನಸೂಯಮ್ಮ ಇವರ ಜಮೀನು.ಪಶ್ಚಿಮಕ್ಕೆಃ ಸ.ನಂ.105/4 ರ ಗೌರಮ್ಮ ಕೋಂ ಮಂಜುನಾಥ ಇವರ ಜಮೀನು.ಉತ್ತರಕ್ಕೆಃ ಸ.ನಂ.105/1 ರ ಮಲ್ಲಪ್ಪ ಬಿನ್ ಸಿದ್ದಪ್ಪ ಇವರ ಜಮೀನು. ದಕ್ಷಿಣಕ್ಕೆಃ ಸುರೇಶ ಬಿನ್ ವೀರಭದ್ರಪ್ಪ ಇವರ ಜಮೀನು.ಈ ದಾವೆಯ ವಸ್ತು ವಿಷಯವಾಗಿದ್ದು, ಇನ್ನು ಮುಂದೆ ದಾವಾ ಸ್ವತ್ತು ಎಂದು ನಮೂದಿಸಲಾಗುವುದು

2. ಸದರಿ ಮಧ್ಯಂತರ ಅರ್ಜಿ ಸಂಖ್ಯೆ 1 ರವರೊಂದಿಗೆ ವಾದಿಯು ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ ಹೇಳುವುದೇನೆಂದರೆ, ದಾವಾ ಸ್ವತ್ತಿನ ಸಂಬಂಧ ನಮ್ಮ ಕುಟುಂಬದಲ್ಲಿ ಈ ಹಿಂದೆ ಮಾನ್ಯ ನ್ಯಾಯಾಲಯದಲ್ಲಿ ಹಿಸ್ಸೆ ದಾವೆ ನಡೆದು ಸದರಿ ದಾವಾ ಸ್ವತ್ತನ್ನು ಅಸಲು ದಾವಾ ನಂ.55/ 2017 ರ ರಾಜಿ ಡಿಕ್ರಿ ಷರತ್ತುಗಳ ಪ್ರಕಾರ ಸದರಿ ದಾವಾ ಸ್ವತ್ತನ್ನು ಮಾರಾಟ ಮಾಡುವ ಸಂದರ್ಭ ಬಂದಲ್ಲಿ ಪ್ರಥಮ ಪ್ರಾಶಸ್ತ್ಯವನ್ನು ರಾಜೀ ಅರ್ಜಿಯ ಉಳಿದ ಹಿಸ್ಸೆದಾರರಿಗೆ ನೀಡತಕ್ಕದ್ದು, ಒಂದು ವೇಳೆ ಮಾರುಕಟ್ಟೆಯ ಬೆಲೆಗೆ ಉಳಿದ ಹಿಸ್ಸೆದಾರರು ಹಕ್ಕನ್ನು ಹೊಂದಿರುತ್ತಾರೆ ಎಂದು ಷರತ್ತಿನ ಮೇಲೆ ರಾಜೀ ಅರ್ಜಿಗೆ ಉಭಯೇತರರು ಸ ಹಿ ಮಾಡಿ ಸಲ್ಲಿಸಿದ್ದು ಇರುತ್ತದೆ. ಈ ರೀತಿ ಷರತ್ತು ಅಸಲು ದಾವಾ ನಂ.55/2017 ರ ದಿನಾಂಕ 16.03.2024 ರ ಅದೇಶದ ಷರತ್ತುಗಳನ್ನು ಉಲ್ಲಂಘನೆ ಮಾಡಿ, 1 ನೇ ಪ್ರತಿವಾದಿ ದಿನಾಂಕ 14.05.2025 ರಂದು ಒಂದು ಶುದ್ಧ ಕ್ರಯ ಪತ್ರವನ್ನು ತಯಾರಿಸಿ, ಅದನ್ನು ಸೊರಬ ಉಪನೋಂದಾಣಾಧಿಕಾರಿಗಳ ಕಛೇರಿಯ 1 ನೇ ಪುಸ್ತಕದ ದಸ್ತಾವೇಜು ನಂ.ಎಸ್.ಆರ್.ಬಿ-1-00784-2025-26 ರಂತೆ ದಿನಾಂಕ 16.05.2025 ರಂದು 2 ನೇ ಪ್ರತಿವಾದಿ ಹೆಸರಿಗೆ ನೊಂದಾಯಿಸಿಕೊಟ್ಟಿರುತ್ತಾರೆ. ಹೀಗೆ 1 ನೇ ಪ್ರತಿವಾದಿ ವಾದಿಯ ಗಮನಕ್ಕೆ ತಾರದಂತೆ ಶೆಡ್ಯೂಲ್ ಸ್ವತ್ತನ್ನು 2 ನೇ ಪ್ರತಿವಾದಿಗೆ ಕ್ರಯಕ್ಕೆ ನೀಡಿರುವುದು ವ್ಯವಹಾರ ನ್ಯಾಯಾಲಯದ ಅಸಲು ದಾವಾ ನಂ.55/2017 ರ ಆದೇಶದ ಪ್ರಕಾರ ಅಸಿಂದುವಾದದ್ದು ಆಗಿರುತ್ತದೆ. ಅಂದರೆ ಕಾನೂನು ಬಾಹಿರ ಕ್ರಯ ಪತ್ರವಾಗಿರುತ್ತದೆ. ಸದರಿ ಸ್ವತ್ತನ್ನು ಕ್ರಯಕ್ಕೆ ಕೊಟ್ಟಿರುವ ವಿಷಯ ವಾದಿಯು ಪ್ರತಿ ವರ್ಷದಂತೆ ದಿನಾಂಕ 19.08.2025 ರಂದು ನಾಟಿ ಮಾಡಿಸಲು ಸದರಿ ಜಮೀನನ್ನು ಟ್ರೈಲರ್ ಮೂಲಕ ಉಳಿಮೆ ಮಾಡುತ್ತಿದ್ದಾಗ 2 ನೇ ಪ್ರತಿವಾದಿ ಹಾಗೂ ಅವಳ ಗಂಡ ಸುರೇಶ ಬಿ ಇವರು ಬಂದು ಸದರಿ ದಾವಾ ಸ್ವತ್ತನ್ನು ನಾವು ಶುದ್ಧ ಕ್ರಯಕ್ಕೆ ಕೊಂಡುಕೊಂಡಿರುತ್ತೇವೆ ಎಂದು ನಾವು ಮಾಡುವ ಕೆಲಸಕ್ಕೆ ಹರಕತ್ತು ಮಾಡಿ,

ಅಡ್ಡಿಪಡಿಸಲು ಬಂದಿರುತ್ತಾರೆ. ಆದರೆ ವಾದಿಯು ಈ ವಿಷಯದ ಬಗ್ಗೆ 1 ನೇ ಪ್ರತಿವಾದಿಯನ್ನು ಕೇಳಲಾಗಿ ಅವರು ವಾದಿಯ ಮಾತಿಗೆ ಯಾವುದೇ ರೀತಿ ಪ್ರತಿಕ್ರಿಯಿಸಿರುವುದಿಲ್ಲ ಮತ್ತು ಯಾವುದೇ ರೀತಿ ಮಾತುಕತೆ ಪಂಚಾಯಿತಿಗೆ ಸ್ಪಂದಿಸಿರುವುದಿಲ್ಲ. ಆದ್ದರಿಂದ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಮಾಡಿಕೊಡಲಾದ ಕ್ರಯ ಪತ್ರ ಅಸಂಧು ಕ್ರಯಪತ್ರ ಎಂದು ಪರಿಗಣಿಸುವಂತೆಯೂ ಮತ್ತು ಸದರಿ ಕ್ರಯ ಪತ್ರದ ಆಧಾರದ ಮೇಲೆ 2 ನೇ ಪ್ರತಿವಾದಿಯರು ಯಾವುದೇ ರೀತಿಯ ಶೆಡ್ಯೂಲ್ ಸ್ವತ್ತನ್ನು ಸದರಿ ದಾವೆ ಇತ್ಯಾರ್ಥವಾಗುವವರೆಗೆ ದೀಡು, ಕ್ರಯ ಮಾಡಿ, ಆಧಾರ, ಅಡಮಾನ ವಗೈರೆ ಮಾಡಿ, ಪರಬಾರೆ ಮಾಡದಂತೆ ವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ I ಅನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

3. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ್ ಜಾರಿಯಾದ ನಂತರ ಪ್ರತಿವಾದಿಯರು ತಮ್ಮ ವಕೀಲರ ಮುಖಾಂತರ ನ್ಯಾಯಾಲಯದ ಮುಂದೆ ಹಾಜರಾಗಿ, ಪ್ರತಿವಾದಿಯರು ಮಧ್ಯಂತರ ಅರ್ಜಿ ಸಂಖ್ಯೆ-1 ಕ್ಕೆ ಪ್ರತಿವಾದ ಪತ್ರವನ್ನು ತಕರಾರು ಎಂದು ಪರಿಗಣಿಸಬೇಕೆಂದು ಮೆಮೋ ದಾಖಲಿಸಿರುತ್ತಾರೆ.

4. 1 ನೇ ಪ್ರತಿವಾದಿಯು ಪ್ರತಿವಾದ ಪತ್ರದ ಪುಟ ಸಂಖ್ಯೆ 2 ರಿಂದ 8 ರಲ್ಲಿ ಹೇಳಿದ ಎಲ್ಲಾ ಸಂಗತಿಗಳನ್ನು ಅಲ್ಲಗಳೆದು, 1 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಸಲ್ಲಿಸಿದ್ದು, ಸದರಿ ಪ್ರತಿವಾದ ಪತ್ರದಲ್ಲಿ , 1 ನೇ ಪ್ರತಿವಾದಿಯು ದಾವಾ ಸ್ವತ್ತುಗಳಲ್ಲಿ ಮಾಲೀಕರು, ಹಕ್ಕುದಾರರು, ಸ್ವಾದೀನದಾರರಾಗಿದ್ದು, ಸದರಿ ದಾವಾ ಸ್ವತ್ತುಗಳ ಸಂಬಂಧ 1 ನೇ ಪ್ರತಿವಾದಿಯು ಕಂದಾಯ ವಗೈರೆಗಳನ್ನು ಪಾವತಿ ಮಾಡುತ್ತಾ ದಾವಾ ಸ್ವತ್ತುಗಳ ಸಂಬಂದ ಮಾಲೀಕರಾಗಿ ಅನುಭವಿಸಿಕೊಂಡು ಬರುತ್ತಿದ್ದು, ಸದರಿ ದಾವಾ ಸ್ವತ್ತಿನ ಸಂಬಂಧ 1 ನೇ ಪ್ರತಿವಾದಿಯು ವಾಸವಿರುವ ಸ್ಥಳಕ್ಕೂ, ದಾವಾ ಸ್ವತ್ತಿನ ಸ್ಥಳಕ್ಕೂ ಬಹಳ ದೂರ ಮತ್ತು ಓಡಾಡಿಕೊಂಡು ಸದರಿ ಸ್ವತ್ತನ್ನು ವ್ಯವಸಾಯ ಮಾಡಿಕೊಂಡು ಹೋಗಲು ತೊಂದರೆ ಆಗಿದ್ದರಿಂದ

ಮತ್ತು 1 ನೇ ಪ್ರತಿವಾದಿಯ ಸದರಿ ದಾವಾ ಸ್ವತ್ತನ್ನು ಮಾರಾಟ ಮಾಡಿ, 1 ನೇ ಪ್ರತಿವಾದಿಯು ವಾಸವಾಗಿರುವಂತಹ ಗ್ರಾಮದಲ್ಲಿಯೇ ಜಮೀನನ್ನು ಖರೀದಿಸಬೇಕೆಂಬ ಇಚ್ಛೇಪಟ್ಟಿದ್ದರಿಂದ ಸದರಿ ದಾವಾ ಸ್ವತ್ತನ್ನು ಮಾರಾಟ ಸಂಬಂಧ ಅಲ್ಲಲ್ಲಿ ಪ್ರಚುರಪಡಿಸಿದ್ದು, ಅದರಂತೆ 1 ನೇ ಪ್ರತಿವಾದಿಯು ದಾವಾ ಸ್ವತ್ತನು ಮಾರಾಟದ ಸಂಬಂಧ ಮೊದಲನೆಯ ಪ್ರಾಶಸ್ತ್ಯವಾಗಿ ತಮ್ಮ ಹಸರಿ ಕುಟುಂಬದ ಸದಸ್ಯರಿಗೆ ಮಾರಾಟ ಮಾಡಬೇಕೆಂದು ಸದರಿ ವಾದಿಯನ್ನು ಹಾಗೂ ಇನ್ನಿತರರ ಹತ್ತಿರ ಕುಟುಂಬದ ಸದಸ್ಯರನ್ನು ಕೇಳಿದ್ದು, ಆದರೆ ದಾವಾ ಸ್ವತ್ತುಗಳ ಸಂಬಂಧ ಮಾರುಕಟ್ಟೆ ಮೌಲ್ಯಕ್ಕೆ ಅನುಗುಣವಾಗಿ ವಾದಿಯವರಾಗಲೀ ಇನ್ನೀತರ 1 ನೇ ಪ್ರತಿವಾದಿಯರ ಕುಟುಂಬದ ಹತ್ತಿರದ ಸದಸ್ಯರುಗಳು ಖರೀದಿಸಲು ನಿರಾಶಾಕ್ತಿವಯಸಿದ್ದು ಮತ್ತು ಊರಿನ ಪಂಚರನ್ನು ಕರೆದುಕೊಂಡು ವಾದಿಯವರನ್ನು ಖುದ್ದಾಗಿ ಬೇಟಿಯಾಗಿ ಸದರಿ ಸ್ವತ್ತನ್ನು ಖರೀದಿಸುವಂತೆ ಕೇಳಿಕೊಂಡಿದ್ದು, ಆದರೆ ದಾಯವಾದಿಯಾದ ವಾದಿಯವರು ದಾವಾ ಸ್ವತ್ತನ್ನು ಉಚಿತವಾಗಿ ಕೊಟ್ಟರೆ ಮಾತ್ರ ತೆಗೆದುಕೊಳ್ಳುತ್ತೇವೆ 1 ನೇ ಪ್ರತಿವಾದಿಯ ಜಮೀನನ್ನು ವಾದಿಯು ಹಣಕೊಟ್ಟು ಖರೀದಿ ಮಾಡುವುದಿಲ್ಲ ಬೇಕಾದರೆ 20,000/- ರೂಗಳನ್ನು ಕೊಡುತ್ತೇವೆ ಇಲ್ಲವಾದರೆ ಬೇಕಾದರೆ ಬೇರೆಯವರಿಗೆ ಸದರಿ ಸ್ವತ್ತನ್ನು ಮಾರಾಟ ಮಾಡುವ ಸಂಬಂಧ ಊರಿನಲ್ಲಿ ಪ್ರಚರ ಮಾಡಿದ್ದರ ಸಂಬಂಧ ಆ ಪ್ರಕಾರವಾಗಿ ದಾವಾ ಸ್ವತ್ತನ್ನು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯಿಂದ ಕಾಯ್ದೆಬದ್ದವಾಗಿ ಮತ್ತು ಅದಕ್ಕೆ ಮಾರುಕಟ್ಟೆ ಮೌಲ್ಯಕ್ಕೆ ಅನುಗುಣವಾಗಿ 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಹಣವನ್ನು ಪಾವತಿಸಿದ್ದರ ಮೇರೆಗೆ ದಿನಾಂಕ 14.05.2025 ರಂದು ನೋಂದಾಯಿತ ಶುದ್ದ ಕ್ರಯ ಪತ್ರವನ್ನು ತಯಾರಿಸಿ ಅದನ್ನು ಸೊರಬದ ಉಪ ನೋಂದಾವಣಾಧಿಕಾರಿಗಳ ಕಛೇರಿಯ 1 ನೇ ಪುಸ್ತಕದ ದಸ್ತಾವೇಜು ನಂ.ಎಸ್.ಆರ್.ಬಿ-1-00784-2025-26 ರಂತೆ ದಿನಾಂಕ 16.05.2025 ರಂದು 2 ನೇ ಪ್ರತಿವಾದಿಯ ಹೆಸರಿಗೆ ನೊಂದಾಯಿಸಿಕೊಟ್ಟಿರುತ್ತಾರೆ. ಅದರಂತೆ ಸದರಿ ದಾವಾ ಸ್ವತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಪಹಣೆ ನಮೂದಾಗಿದ್ದು, ಅದರಂತೆ 2 ನೇ

ಪ್ರತಿವಾದಿಯೇ ದಾವಾ ಸ್ವತ್ತನ್ನು ಸ್ವಾದೀನಕ್ಕೆ ಪಡೆದು ವ್ಯವಸಾಯ ಮಾಡಿಕೊಂಡು ಬರುತ್ತಿದ್ದು ಈಗಲೂ ಸಹಾ 2ನೇ ಪ್ರತಿವಾದಿಯ ಸ್ವಾದೀನದಲ್ಲಿ ದಾವಾ ಸ್ವತ್ತು ಇದ್ದು, ಆದ್ದರಿಂದ ಸುಳ್ಳು ಅಂಶಗಳನ್ನು ಸೃಷ್ಟಿಸಿಕೊಂಡು ಮತ್ತು ಸತ್ಯ ಸಂಗತಿಯನ್ನು ಮರೆಮಾಚಿ 1ನೇ ಪ್ರತಿವಾದಿಗೆ ತೊಂದರೆ ಕೂಡಬೇಕು ಎಂಬ ಉದ್ದೇಶದಿಂದ ತಂದಿರುವಂತಹ ಈ ಮದ್ಯಂತರ ಅರ್ಜಿ ನಂ.1ನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

5. 2ನೇ ಪ್ರತಿವಾದಿಯು ಪ್ರತಿವಾದ ಪತ್ರದಪುಟ ಸಂಖ್ಯೆ 2 ರಿಂದ 8 ರಲ್ಲಿ ಹೇಳಿದ ಎಲ್ಲಾ ಸಂಗತಿಗಳನ್ನು ಅಲ್ಲಗಳೆದು, 2ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಸಲ್ಲಿಸಿದ್ದು, ಸದರಿ ಪ್ರತಿವಾದ ಪತ್ರದಲ್ಲಿ 2ನೇ ಪ್ರತಿವಾದಿಯು ದಾವಾ ಸ್ವತ್ತುಗಳ ಸಂಬಂದ 1ನೇ ಪ್ರತಿವಾದಿಯಿಂದ ಮಾರಾಟದ ಸಂಬಂಧ ಮಾಹಿತಿ ತಿಳಿದಿದ್ದು, ಅದತಂರೆ 2ನೇ ಪ್ರತಿವಾದಿಯು 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ದಾವಾ ಸ್ವತ್ತಿನ ಸಂಬಂಧ ದಾಖಲಾತಿಗಳನ್ನು ಪರಿಶೀಲಿಸಿ ಕಾನೂನುಬದ್ದವಾಗಿದೆ ಎಂದು ತಿಳಿದುಕೊಂಡು ಮತ್ತು ಸದರಿ ದಾವಾ ಸ್ವತ್ತಿನ ಸಂಬಂಧ 1ನೇ ಪ್ರತಿವಾದಿಯ ಹಣಕಾನಿನ ಸಮಸ್ಯೆಯಿಂದ ದಾವಾ ಸ್ವತ್ತನ್ನು ಮಾರಾಟ ಮಾಡಬೇಕೆಂದು ಉದ್ದೇಶಿಸಿದ್ದು, ಅದರಂತೆ 1ನೇ ಪ್ರತಿವಾದಿಯು ತಮ್ಮ ಕುಟುಂಬದ ಸದಸ್ಯರುಗಳ ಮದ್ಯದಲ್ಲಿ ಖರೀದಿ ವ್ಯವಹಾರ ಮಾಡಬೇಕೆಂದು ಉದ್ದೇಶಿಸಿದ್ದು, ಅದರಂತೆ ಸದರಿ ವಾದಿಯವರಿಗೆ 1ನೇ ಪ್ರತಿವಾದಿಯು ಸದರಿ ದಾವಾ ಸ್ವತ್ತನ್ನು ಖರೀದಿಸುವಂತೆ ಹಲವಾರು ಬಾರಿ ಮೌಖಿಕವಾಗಿ ಪಂಚರ ಸಮಕ್ಷಮದಲ್ಲಿ ಕೇಳಿದ್ದು ಆದರೆ ವಾದಿಯವರು ಸದರಿ ದಾವಾ ಸ್ವತ್ತಿನ ಸಂಬಂಧ ಅತ್ಯಂತ ಕಡಿಮೆ ಬೆಲೆಗೆ ಅಂದರೆ 20,000/- ರೂಗಳಿಗೆ ಕೊಡುತ್ತೇನೆ ಇಲ್ಲದಿದ್ದರೆ ನಿಮ್ಮ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಬಹುದು ಎಂದು ಮೌಖಿಕವಾಗಿ ಹೇಳಿದ್ದರಿಂದ ಅನಿವಾರ್ಯವಾಗಿ 1ನೇ ಪ್ರತಿವಾದಿಯು ಮಾರಾಟ ಮಾಡುವ ಸಂಬಂಧ ಊರಿನಲ್ಲಿ ಪ್ರಚಾರ ಮಾಡಿದ್ದು, ಆ ಪ್ರಕಾರವಾಗಿ ದಾವಾ ಸ್ವತ್ತನ್ನು 2ನೇ ಪ್ರತಿವಾದಿಯು 1ನೇ ಪ್ರತಿವಾದಿಯಿಂದ ಕಾಯ್ದೆಬದ್ದವಾಗಿ ಮತ್ತು ಅದಕ್ಕೆ ಮಾರುಕಟ್ಟೆ ಮೌಲಕ್ಕೆ ಅನುಗುಣವಾಗಿ

2ನೇ ಪ್ರತಿವಾದಿಯು 1ನೇ ಪ್ರತಿವಾದಿಗೆ ಹಣವನ್ನು ಪಾವತಿಸಿದ್ದರ ಮೇರೆಗೆ ದಿನಾಂಕ 14.05.2025 ರಂದು ನೋಂದಾಯಿತ  ಶುದ್ದ ಕ್ರಯ ಪತ್ರವನ್ನು ತಯಾರಿಸಿ ಅದನ್ನು ಸೊರಬದ ಉಪ ನೋದಾವಣಾಧಿಕಾರಿಗಳ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ನಂ.ಎಸ್.ಆರ್.ಬಿ-1-00784-2025-26 ರಂತೆ ದಿನಾಂಕ 16.05.2025 ರಂದು 2ನೇ ಪ್ರತಿವಾದಿಯ ಹೆಸರಿಗೆ ನೊಂದಾಯಿಸಿಕೊಟ್ಟಿರುತ್ತಾರೆ. ಅದರಂತೆ ಸದರಿ ದಾವಾ ಸ್ವತ್ತು 2ನೇ ಪ್ರತಿವಾದಿಯ ಹೆಸನರಿಲ್ಲಿ ಖಾತೆ ಪಹಣಿ ನಮೂದಾಗಿದ್ದು, ಅದರಂತೆ 2ನೇ ಪ್ರತಿವಾದಿಯೇ ದಾವಾ ಸ್ವತ್ತನ್ನು ಸ್ವಾದೀನಕ್ಕೆ  ಪಡೆದು ವ್ಯಸಾಯ ಮಾಡಿಕೊಂಡು ಬರುತ್ತಿದ್ದು ಈಗಲೂ ಸಹಾ 2ನೇ ಪ್ರತಿವಾದಿಯ ಸ್ವಾದೀನದಲ್ಲಿ ದಾವಾ ಸ್ವತ್ತು ಇದ್ದು,ಆದ್ದರಿಂದ ಸುಳ್ಳು ಅಂಶಗಳನ್ನು ಸೃಷ್ಟಿಸಿಕೊಂಡು ಮತ್ತು ಸತ್ಯ ಸಂಗತಿಯನ್ನು ಮರೆಮಾಚಿ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ತಂದಿರುವಂತಹ ಈ ಮದ್ಯಂತರ ಅರ್ಜಿ ನಂ.1 ನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

6. ಉಭಯ ಪಕ್ಷಗಾರ ವಕೀಲರು ಮಂಡಿಸಿರುವ ವಾದವನ್ನು ಆಲಿಸಿದ್ದು ಮತ್ತು ಪಕ್ಷಗಾರರು ನ್ಯಾಯಾಲಯಕ್ಕೆ ಸಲ್ಲಿಸಿರುವ ಈ ದಾವೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

7. ಈ ಸಂದರ್ಭದಲ್ಲಿ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

**ಅಂಶಗಳು**

1. ವಾದಿಯು ತಮ್ಮ ಪರವಾಗಿ ಮೇಲ್ನೋಟದ ದಾವೆ ಇದೆ ಎಂದು ಸಾಬೀತುಪಡಿಸುವರೇ?
2. ಅನುಕೂಲತೆಯ ಒಲವು ವಾದಿಯ ಪರವಾಗಿ ಇದೆಯೇ?
3. ವಾದಿಗೆ ಮಧ್ಯಂತರ ಅರ್ಜಿ ಸಂಖ್ಯೆ I ಪುರಸ್ಕರಿಸದಿದ್ದರೆ, ತುಂಬಲಾರದ ನಷ್ಟ,

ಸರಿಪಡಿಸಲಾಗದ ಸ್ಥಿತಿ ಉಂಟಾಗುತ್ತದೆಯೇ?

4. ಏನು ಆದೇಶ?

8. ಮೇಲಿನ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರುತ್ತದೆ:

| | | |
|---|---|---|
| ಅಂಶ 1 | : | **ನಕಾರಾತ್ಮಕವಾಗಿ.** |
| ಅಂಶ 2 | : | **ನಕಾರಾತ್ಮಕವಾಗಿ.** |
| ಅಂಶ 3 | : | **ನಕಾರಾತ್ಮಕವಾಗಿ.** |
| ಅಂಶ.4 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ. |

**ಕಾರಣಗಳು**

9. **ಅಂಶಃ 1 ರಿಂದ 3:-** ಈ ಮೂರು ಅಂಶಗಳು ಒಂದಕ್ಕೊಂದು ಅಂತರ ಸಂಬಂಧ ಹೊಂದಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಾದಿಯು ವಾದಪತ್ರದಲ್ಲಿ ದಾವಾ ಸ್ವತ್ತು ವಾದಿಯರ ಕುಟುಂಬದ ಜಮೀನಾಗಿರುತ್ತದೆ. ವಾದಿಯ ತಾಯಿಯ ತಂಗಿಯಾದ ಅಂದರೆ ವಾದಿಯ ಚಿಕ್ಕಮ್ಮನಾದ 1ನೇ ಪ್ರತಿವಾದಿ ಲಕ್ಷ್ಮಮ್ಮ ಕೋಂ ಪ್ರದಾನಪ್ಪ @ ಪ್ರಧಾನಿ ಗಾಜೇಟ್ ಆದ ಇವಳು ಅಸಲು ದಾವಾ ನಂ.55/2024 ರಂತೆ ದಾವೆ ದಾಖಲಿಸಿದ್ದು, ಸದರಿ ದಾವೆಯನ್ನು ರಾಜೀ ಅರ್ಜಿಯ ಮೂಲಕ ಇತ್ಯಾರ್ಥಪಡಿಸಿಕೊಂಡು ದಾವಾ ಸ್ವತ್ತು 1ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ. ಮುಂದುವರೆದು ಸದರಿ ದಾವೆಯಲ್ಲಿ ರಾಜೀ ಮುಖಾಂತರ ಇತ್ಯಾರ್ಥ ಅಗಿದ್ದರೂ ಆ ಪ್ರಕಾರ ಅವರವರ ಹೆಸರಿಗೆ ಖಾತೆ ಪಹಣಿಯಾಗಿರುತ್ತದೆ. ಆದರೆ 1ನೇ ಪ್ರತಿವಾದಿಯು ದೂರದ ಊರಿನಲ್ಲಿರುವುದರಿಂದ ಅವರ ಒಪ್ಪಿಗೆಯ ಮೇರೆಗೆ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಹಾಗೂ ಬೇಸಾಯದಿಂದ ಬಂದ ಬೆಳೆಯನ್ನು ಸಮಬಾಗ

ಮಾಡಿಕೊಂಡು ಅನುಭವಿಸಿಕೊಂಡು ವ್ಯವಸಾಯ ಮಾಡತ್ತಾ ದಾವಾ ಸ್ವತ್ತನ್ನು ಸ್ವಾದೀನದಲ್ಲಿದ್ದು ಬಂದಿದ್ದು ಇರುತ್ತದೆ.

10. ಅದೇ ರೀತಿ ಸದರಿ ರಾಜೀ ಅರ್ಜಿಯಲ್ಲಿ ಒಂದು ವೇಳೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಸಂದರ್ಭ ಬಂದಲ್ಲಿ ಪ್ರಥಮ ಪ್ರಾಶಸ್ತ್ಯವನ್ನು ಉಳಿದ ಹಿಸ್ಸೆದಾರರಿಗೆ ನೀಡತಕ್ಕದ್ದು ಹಾಗೂ ಒಂದು ವೇಳೆ ಮಾರುಕಟ್ಟೆಯ ಬೆಲೆಗೆ ಉಳಿದ ಹಿಸ್ಸೆದಾರರು ಖರೀದಿ ಮಾಡದೇ ಇದ್ದಲ್ಲಿ ಬೇರೆಯವರಿಗೆ ಮಾರಾಟ ಮಾಡಲು ಹಿಸ್ಸೆದಾರರು ಹಕ್ಕನ್ನು ಹೊಂದಿರುತ್ತಾರೆ ಎಂದು ಷರತ್ತಿನ ಮೇಲೆ ರಾಜೀ ಅರ್ಜಿಗೆ ಉಭಯೇತರರು ಸಹಿ ಮಾಡಿ ಸಲ್ಲಿಸಿದ್ದು ಇರುತ್ತದೆ. ಆದರೆ 1 ಮತ್ತು 2 ನೇ ಪ್ರತಿವಾದಿಯರು ಸದರಿ ಷರತ್ತುಗಳನ್ನು ಉಲ್ಲಂಘನೆ ಮಾಡಿ 1 ನೇ ಪ್ರತಿವಾದಿ ದಿನಾಂಕ 14.05.2025 ರಂದು ಒಂದು ಶುದ್ದ ಕ್ರಯ ಪತ್ರವನ್ನು ತಯಾರಿಸಿ, ಅದನ್ನು ದಿನಾಂಕ 16.05.2025 ರಂದು 2 ನೇ ಪ್ರತಿವಾದಿಯ ಹೆಸರಿಗೆ ನೋಂದಾಯಿಸಿಕೊಟ್ಟಿರುತ್ತಾರೆ. ಆ ಪ್ರಕಾರ 1 ನೇ ಪ್ರತಿವಾದಿಯು ವಾದಿಯ ಗಮನಕ್ಕೆ ತಾರದೆ ದಾವಾ ಸ್ವತ್ತನ್ನು 2 ನೇ ಪ್ರತಿವಾದಿಗೆ ಕ್ರಯಕ್ಕೆ ನೀಡಿರುವುದಾಗಿ ಅಸಲು ದಾವಾ ನಂ.55/2017 ರ ರಾಜೀ ಡಿಕ್ರಿಯಂತೆ ಅಸಿಂಧುವಾದದ್ದು ಆಗಿರುತ್ತದೆ. ಆ ಕಾರಣ ಸದರಿ ಕ್ರಯಪತ್ರವನ್ನು ಅಸಿಂದು ಎಂದು ಘೋಷಿಸಿ 2 ನೇ ಪ್ರತಿವಾದಿಯ ವಿರುದ್ದ ಖಾಯಂ ಪ್ರತಿಬಂದಕಾಜ್ಞೆ ಆದೇಶ ಮಾಡುವಂತೆ ಪ್ರಸ್ತುತ ದಾವೆಯನ್ನು ದಾಖಲಿಸಿ ಅದರೊಂದಿಗೆ ಈ ಮದ್ಯಂತರ ಅರ್ಜಿಯನ್ನು ದಾಖಲಿಸಿರುತ್ತಾರೆ. ವಾದಿಯು ಮೇಲ್ನೋಟದ ದಾವೆಯನ್ನು ರುಜುವಾತುಪಡಿಸಲು ದಾವಾ ಸ್ವತ್ತಿನ ಪಹಣಿ ಪತ್ರಿಕೆ, ಮ್ಯುಟೇಷನ್, ಅಸಲು ದಾವಾ ನಂ.55/2024 ರ ಆದೇಶದ ಪ್ರತಿ, ಕ್ರಯದ ದೃಡೀಕರಣ ಪತ್ರವನ್ನು ಹಾಜರುಪಡಿಸಿರುತ್ತಾರೆ. ಅದೇ ರೀತಿ ವಾದಿಯು ವಾದಪತ್ರ, ಮದ್ಯಂತರ ಅರ್ಜಿ ಸಂಖ್ಯೆ.1 ರಲ್ಲಿ ಲಗತ್ತಿಸಿದ ಪ್ರಮಾಣ ಪತ್ರವನ್ನು ಹಾಗೂ ದಾಖಲೆಗಳನ್ನು ಹಾಜರುಪಡಿಸಿ ಮೇಲ್ನೋಟದ ದಾವೆ ವಾದಿಯ ಪರ ಇದೆ ಹಾಗೂ ಅನುಕೂಲತೆಯ ಒಳವು ಸಹ ವಾದಿಯ ಪರ ಇದೆ ಆ ಕಾರಣ ಈ ಮದ್ಯಂತರ ಅರ್ಜಿ ನಂ.1 ನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

11. ಪ್ರತಿವಾದಿಯರ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ 1 ನೇ ಪ್ರತಿವಾದಿಯು ದಾವಾ ಸ್ವತ್ತುಗಳ ಮಾಲೀಕರು, ಹಕ್ಕುದಾರರು ಹಾಗೂ ಸ್ವಾದೀನದಾರರಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. ಸದರಿ ದಾವಾ ಸ್ವತ್ತು 1 ನೇ ಪ್ರತಿವಾದಿ ವಾಸವಿರುವ ಸ್ಥಳಕ್ಕೂ ಬಹಳ ದೂರ ಮತ್ತು ಓಡಾಡಿಕೊಂಡು ವ್ಯವಸಾಯ ಮಾಡಲು ಕಷ್ಟಕರವಾಗಿರುವ ಕಾರಣ ಸದರಿ ದಾವಾ ಸ್ವತ್ತನ್ನು ಮಾರಾಟ ಮಾಡುವ ಸಂಬಂದ ಅಲ್ಲಲ್ಲಿ ಪ್ರಚುರಪಡಿಸಿದ್ದು ಅದರಂತೆ 1 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಮಾರಾಟದ ಸಂಬಂಧ ಮೊದಲನೆ ಪ್ರಾಶಸ್ತ್ಯವಾಗಿ ತಮ್ಮ ಹತ್ತಿರ ಕುಟುಂಬದ ಸದಸ್ಯರಿಗೆ ಮಾರಾಟ ಮಾಡಬೇಕೆಂದು ವಾದಿಯನ್ನು ಹಾಗೂ ಇನ್ನಿತರರ ಕುಟುಂಬದ ಸದಸ್ಯರನ್ನು ಕೇಳಿದ್ದು, ಅದರೆ ದಾವಾ ಸ್ವತ್ತುಗಳ ಸಂಬಂದ ಮಾರುಕಟ್ಟೆ ಮೌಲ್ಯಕ್ಕೆ ಅನುಗುಣವಾಗಿ ವಾದಿಯವರಾಗಲೀ ಇನ್ನೀತರು ಖರೀದಿಸಲು ನಿರಾಶಾಕ್ತಿವಯಸಿದ್ದು ಹಾಗೂ ಊರಿನ ಪಂಚರನ್ನು ಕರೆದುಕೊಂಡು ವಾದಿಯವರನ್ನು ಖುದ್ದಾಗಿ ಬೇಟಿಯಾಗಿ ಸದರಿ ಸ್ವತ್ತನ್ನು ಖರೀದಿಸುವಂತೆ ಕೇಳಿಕೊಂಡಿದ್ದು, ಆದರೆ ದಾಯವಾದಿಯಾದ ವಾದಿಯರು ದಾವಾ ಸ್ವತ್ತನ್ನು ಉಚಿತವಾಗಿ ಕೊಟ್ಟರೆ ಮಾತ್ರ ತಗೆದುಕೊಳ್ಳುತ್ತೇವೆ 1 ನೇ ಪ್ರತಿವಾದಿಯ ಜಮೀನನ್ನು ವಾದಿಯು ಹಣಕೊಟ್ಟು ಖರೀದಿ ಮಾಡುವುದಿಲ್ಲ ಬೇಕಾದರೆ 20,000/- ರೂಗಳನ್ನು ಕೊಡುತ್ತೇವೆ ಇಲ್ಲವಾದರೆ ಬೇಕಾದರೆ ಬೇರೆಯವರಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಬಹುದು ಎಂದು ಪಂಚರ ಸಮಕ್ಷಮದಲ್ಲಿ 1 ನೇ ಪ್ರತಿವಾದಿಗೆ ಮೌಖಿಕವಾಗಿ ಹೇಳಿದ್ದು, ಅದರಂತೆ 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮಾರಾಟ ಮಾಡುವ ಸಂಬಂಧ ಊರಿನಲ್ಲಿ ಪ್ರಚರ ಮಾಡಿದ್ದರ ಸಂಬಂಧ ಕಾಯ್ದೆಬದ್ದವಾಗಿ ಹಾಗೂ ಅದಕ್ಕೆ ಮಾರುಕಟ್ಟೆ ಮೌಲಕ್ಕೆ ಅನುಗುಣವಾಗಿ ಹಣವನ್ನು ಪಾವತಿಸಿ ದಿನಾಂಕ 14.05.2025 ರಂದು ನೊಂದಾಯಿತ ಶುದ್ದ ಕ್ರಯಪತ್ರವನ್ನು ತಯಾರಿಸಿ ಅದನ್ನು ದಿನಾಂಕ 16.05.2025 ರಂದು ನೋಂದಾಯಿಸಿಕೊಟ್ಟಿರುತ್ತಾರೆ. ಅದರಂತೆ ಸದರಿ ದಾವಾ ಸ್ವತ್ತು 2 ನೇ ಪ್ರತಿವಾದಿಯ ಹಸರಿನಲ್ಲಿ ಖಾತೆ ಪಹಣಿ ನಮೂದಾಗಿದ್ದು ಅವರು ಸ್ವಾದೀನಕ್ಕೆ ಪಡೆದು ವ್ಯವಸಾಯ ಮಾಡಿಕೊಂಡು ಬಂದಿರುತ್ತಾರೆ.

ಅದರಂತೆ ಈ ಪ್ರಕರಣದಲ್ಲಿ ಪ್ರತಿವಾದಿಯರು ಸಹ ಪಹಣಿ ಪತ್ರಿಕೆ, ಮ್ಯುಟೇಷನ್ ಹಾಜರುಪಡಿಸಿದ್ದು, ಅದರಂತೆ ದಾವಾ ದಾಖಲಿಸಿದ ದಿನದಂದು 2 ನೇ ಪ್ರತಿವಾದಿಯು ಕಬ್ಜಾ ಸ್ವಾದೀನಾನುಭವದಲ್ಲಿದ್ದು ವ್ಯವಸಾಯವನ್ನು ಮಾಡಿಕೊಂಡು ಬಂದಿರುತ್ತಾರೆ. ಈ ಪ್ರಕರಣದಲ್ಲಿ ವಾದಿಯು ಮೇಲ್ನೋಟದ ದಾವೆ ಅನುಕೂಲತೆಯ ಉಳವು ತನ್ನ ಪರ ಇದೆ ಎಂದು ರುಜುವಾತುಪಡಿಸಲು ಸಂಪೂರ್ಣಪವಾಗಿ ವಿಪಲರಾಗಿರುತ್ತಾರೆ. ಆ ಕಾರಣ ಈ ಮದ್ಯಂತರ ಅರ್ಜಿ ನಂ.1 ನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

12. ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ವಿಲೇ ಮಾಡುವಾಗ ನ್ಯಾಯಾಲಯಕ್ಕೆ ಸದರಿ ಅರ್ಜಯನ್ನು ಸಲ್ಲಿಸಿದಂತಹ ಪಕ್ಷಗಾರನ್ನು ತಮ್ಮ ಪರವಾಗಿ ಮೇಲ್ನೋಟದ ದಾವೆ ಇದೆ ಎನ್ನುವುದನ್ನು ಹಾಗೂ ಅನುಕೂಲತನೆಯ ಒಳವು ತನ್ನ ಪರವಾಗಿ ಇದೆ ಒಂದು ವೇಳೆ ಅರ್ಜಿಯಲ್ಲಿ ಕೋರಿರುವಂತೆ ಪ್ರತಿಬಂದಕಾಜ್ಞೆಯನ್ನು ನೀಡದೆ ಇದ್ದ ಪಕ್ಷದಲ್ಲಿ ತನಗೆ ಪ್ರತಿವಾದಿಯರಿಗಿಂತ ಹೆಚ್ಚು ನಷ್ಟ ಹಾಗೂ ಹಾನಿ ಉಂಟಾಗುತ್ತದೆಂದು ಸದರಿ ಅರ್ಜಿಯನ್ನು ಸಲ್ಲಿಸಿದಂತಹ ವ್ಯಕ್ತಿಯು ಮೇಲ್ನೋಟಕ್ಕೆ ಸಾಬೀತುಪಡಿಸುವ ಹೊಣಾಗಾರಿಕೆಯನ್ನು ಹೊಂದಿರುತ್ತಾನೆ. ಮೇಲ್ನೋಟದ ದಾವೆಯೆಂದರೆ ವಾದಿಯ ತನಗೆ ಒಂದು ವಸ್ತು ವಿಷಯದ ಬಗ್ಗೆ ತನೆಗೆ ಇದೆ ಎಂದು ಹೇಳಿಲಾದ ಹಕ್ಕಿನ ಬಗ್ಗೆ ವಿಚಾರಣೆಯಾಗಬಹುದಾದ ಪ್ರಕರಣ ಅಂದರೆ ಮೇಲ್ನೋಟಕ್ಕೆ ದಾವೆಯನ್ನು ವಿಚಾರಣೆ ಮಾಡಬಹುದೆಂದು ನ್ಯಾಯಾಲಯಕ್ಕೆ ಮೊದಲನೆಯದಾಗಿ ಕಂಡು ಬರಬೇಕಾಗುತ್ತದೆ. ಕೇವಲ ಮೇಲ್ನೋಟದ ದಾವೆ ತನ್ನ ಪರವಾಗಿ ಇದೆ ಎಂದು ಮಾತ್ರಕ್ಕೆ ವಾದಿಯು ತಾತ್ಕಾಲಿಕ ನಿರ್ಬಂದಕಾಜ್ಞೆ ಪರಿಹಾರಕ್ಕೆ ಅರ್ಹನಾಗಿರುವುದಿಲ್ಲ. ಅದನ್ನು ಹೊರತುಪಡಿಸಿ ವಾದಿಯು ತನ್ನ ಪರವಾಗಿ ಅನುಕೂಲತೆಯ ಒಳವು ಅಂದರೆ ಒಂದು ವೇಳೆ ಆರ್ಜಿಯನ್ನು ಪುರಸ್ಕರಿಸದೇ ಇದ್ದರೆ ಪ್ರತಿವಾದಿಯರಿಗೆ ಹೊಲಿಸಿದ್ದಲ್ಲಿ ತನಗೆ ಹೆಚ್ಚಿನ ಅನಾನೂಕೂಲತೆ ಉಂಟಾಗುತ್ತದೆಂದು ನ್ಯಾಯಾಲಯದ ಮಾನದಟ್ಟ ಮಾಡಬೇಕಾಗುತ್ತದೆ. ಅದೇ ರೀತಿ ತನ್ನ

ಪರವಾಗಿ ತಾತ್ಕಾಲಿಕ ನಿರ್ಬಂದಕಾಜ್ಞೆಯನ್ನು ನೀಡದೆ ಇದ್ದ ಪಕ್ಷದಲ್ಲಿ ತನಗೆ ಪ್ರತಿವಾದಿಯರಿತ ಹೆಚ್ಚು ಹಾನಿ ಮತ್ತು ನಷ್ಟ ಉಂಟಾಗುತ್ತದೆ ಹಾಗೂ ಸದರಿ ನಷ್ಟವನ್ನು ಯಾವುದರಿಂದಲೂ ಭರಿಸಲು ಸಾದ್ಯವಿಲ್ಲವೆಂದು ಸಾಬೀತುಪಡಿಸಬೇಕಾಗುತ್ತದೆ. ಸದರಿ 3 ಅಂಶಗಳನ್ನು ವಾದಿಯು ಸಾಬೀತುಪಡಿಸಿದರೂ ಸಹ ತಾತ್ಕಾಲಿಕ ಪ್ರತಿಬಂದಕಾಜ್ಞೆ ಆದೇಶ ನೀಡುವುದು ನ್ಯಾಯಾಲಯದ ವಿವೇಚನೆಗೆ ಬಿಟ್ಟು ವಿಚಾರವಾಗಿರುತ್ತದೆ. ಒಂದು ವೇಳೆ ವಾದಿಯು ವಾಸ್ತವ ಸಂಗತಿಗಳನ್ನು ಮಾರೆಮಚಿ ಶುದ್ದ ಹಸ್ತದಿಂದ ನ್ಯಾಯಾಲಯಕ್ಕೆ ಬಂದಿಲ್ಲವೆಂದು ಕಂಡು ಬಂದರೂ ಸಹ ವಾದಿಗೆ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶಕ್ಕೆ ಅರ್ಹನಾಗಿರುವುದಿಲ್ಲ. ಎಲ್ಲ ಅಂಶಗಳ ಗಮನದಲ್ಲಿರಿಸಿಕೊಂಡು ಪ್ರಸ್ತುದ ಪ್ರಕರಣವನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.

13. ದಾವಾ ಸ್ವತ್ತು ತನ್ನ ಸ್ವಾದೀನ ಹಾಗೂ ಮೇಲ್ನೋಟದ ದಾವೆ ತನ್ನ ಪರ ಇದೆ ಎಂದು ಅದೇ ರೀತಿ ಅನುಕೂಲತೆಯ ಒಲವು ಸಹ ತನ್ನ ಪರ ಇದೆ ಎಂದು ತೋರಿಸಲು ವಾದಿಯು ದಾವಾ ಸ್ವತ್ತಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ್ದಲ್ಲಿ 2 ನೇ ಪ್ರತಿವಾದಿಯ ಹೆಸರು ಎಂ.ಆರ್.ಹೆಚ್15/2024-25 ರಂತೆ ದಾಖಲಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅದೇ ರೀತಿ ಪ್ರಸ್ತುತ ಪ್ರಕರಣದಲ್ಲಿ 2 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ದಿನಾಂಕ 16.05.2025 ರಂದು ಖರೀದಿಸಿದ ಬಗ್ಗೆ ಯಾವುದೇ ವಿವಾದಿತ ವಿಷಯವಾಗಿರುವುದಿಲ್ಲ. ಈ ಪ್ರಕರಣದಲ್ಲಿ ವಾದಿಯು ತನ್ನ ವಾದ ಪತ್ರದಲ್ಲಿ ಹಾಗೂ ವಾದ ಮಂಡನೆಯಲ್ಲಿ ದಾವಾ ಸ್ವತ್ತಿನ ಪಹಣಿ ಪತ್ರಿಕೆಯಲ್ಲಿ 2 ನೇ ಪ್ರತಿವಾದಿಯ ಹೆಸರು ಇದ್ದರೂ ಸಹ ದಾವಾ ಸ್ವತ್ತಿನಲ್ಲಿ ತಾನೇ ಕಬ್ಜಾ ಸ್ವಾದೀನಾನುಭವದಲ್ಲಿದ್ದು ಸಾಗುವಳಿ ಮಾಡುತ್ತಾ ಬಂದಿರುತ್ತಾರೆಂದು ವಾದಿಸಿರುತ್ತಾರೆ. ಅಂದರೆ ಈ ಪ್ರಕರಣದಲ್ಲಿ ವಾದಿಯು ದಾವೆ ದಾಖಲಿಸಿದ ದಿನದಂದು ಈ ಹಂತದಲ್ಲಿ ಸ್ವಾದೀನಾನುಭವದಲ್ಲಿ ಇದ್ದನೇ ಎಂದು ರುಜುವಾತುಪಡಿಸುವ ಹೊಣೆಗಾರಿಕೆಯು ಹೊಂದಿರುತ್ತಾನೆ. ಅದೇ ರೀತಿ ಈ

ಪ್ರಕರಣದಲ್ಲಿ ಇನ್ನೊಂದು ಮುಖ್ಯವಾದ ವಿಷಯವನ್ನು ಗಮನಿಸುವುದೆನಂದರೆ ವಾದಿಯ ತಾಯಿ ಮತ್ತು 1ನೇ ಪ್ರತಿವಾದಿ ಅಕ್ಕ ತಂಗಿಯರಿದ್ದು, ಅವರ ಮದ್ಯೆ ಅಸಲು ದಾವಾ ನಂ .55/2017 ರಲ್ಲಿ ರಾಜೀ ಡಿಕ್ರಿಯಂತೆ ದಾವಾ ಆಸ್ತಿಯನ್ನು 1ನೇ ಪ್ರತಿವಾದಿಯ ಹಿಸ್ಸೆ ಹಕ್ಕಿಗೆ ಹೋಗಿರುತ್ತದೆಂದು ಯಾವುದೇ ವಿವಾದಿತ ವಿಷಯವಿರುವುದಿಲ್ಲ.

14. ಈ ಪ್ರಕರಣದಲ್ಲಿ ಮುಖ್ಯವಾಗಿ ಗಮನಿಸುವುದೆನೆಂದರೆ ಯಾವುದೇ ಒಬ್ಬ ಕುಟುಂಬದ ಸದ್ಯಸರು ತನ್ನ ಹಿಸ್ಸೆಗೆ ಬಂದ ಆಸ್ತಿಯನ್ನು ಒಂದು ವೇಳೆ ಮಾರಾಟ ಮಾಡಲು ಬಯಸಿದರೆ ತಮ್ಮ ಕುಟುಂಬದ ಸದ್ಯಸರು ಪ್ರಥಮ ಪ್ರಾಶಸ್ತ್ಯವಾಗಿ ನೀಡಬೇಕೆಂದು ಒಂದು ವೇಳೆ ಮಾರುಕಟ್ಟೆ ಬೆಲೆಗೆ ಅವರು ಖರೀದಿಸಿದೆ ಇದ್ದರೆ ತಮ್ಮ ಕುಟುಂಬದ ಬೇರೆ ಸದಸ್ಯರಿಗೆ ಮಾರಾಟ ಮಾಡಲು ಅವಕಾಶವಿರುತ್ತದೆ. ಸದರಿ ಅಂಶವನ್ನು ವಾದಿಯು ರಾಜೀ ಅರ್ಜಿಯಲ್ಲಿ ನಮೂದಿಸಿದ ಸಂಗತಿಯಾಗಿರುತ್ತದೆಂದು ವಾದಿಸಿರುತ್ತಾರೆ. ವಾದಿಯು ಅಸಲು ದಾವಾ ನಂ.55/2017 ರಲ್ಲಿ ಅದಂತಹ ರಾಜೀ ಡಿಕ್ರಿಯನ್ನು ಹಾಜರುಪಡಿಸಿದ್ದು, ಸದರಿ ರಾಜೀ ಡಿಕ್ರಿಯನ್ನು ಪರಿಶೀಲಿಸಿದ್ದಲ್ಲಿ 1ನೇ ಪ್ರತಿವಾದಿಯು ವಾದಿಯಾಗಿದ್ದು ವಾದಿಯು 3ನೇ ಪ್ರತಿವಾದಿಯಗಿರುತ್ತಾನೆ. ಅದೇ ರೀತಿ ಸದರಿ ರಾಜೀ ಡಿಕ್ರಿಯನ್ನು ಪರಿಶೀಲಿಸಿದ್ದಲ್ಲಿ ದಾವಾ ಸ್ವತ್ತು 1ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುವ ಬಗ್ಗೆ ಸ್ಪಷ್ಟವಾಗಿ ಕಂಡು ಬರುತ್ತದೆ. ಅದೇ ರೀತಿ ಸದರಿ ರಾಜೀ ಡಿಕ್ರಿಯನ್ನು ಪರಿಶೀಲಿಸಿದ್ದಲ್ಲಿ, ಸದರಿ ರಾಜೀ ಡಿಕ್ರಿಯಲ್ಲಿ ವಾದಿ 1 ರಿಂದ 6ನೇ ಪ್ರತಿವಾದಿಯರು ಮೇಲ್ಕಂಡ ರಾಜಿಯಂತೆ ಸ್ವತ್ತನ್ನು ಸ್ವಾಧಿನಕ್ಕೆ ಪಡೆದುಕೊಂಡಿರುತ್ತಾರೆಂದು ಸ್ಪಷ್ಟವಾಗಿ ಕಂಡು ನಮೂದಿಸಿರುತ್ತಾರೆ.

15. ಅದೇ ರೀತಿ ಮುಂದುವರೆದು ವಾದಿ ಪ್ರತಿವಾದಿಯರು ಹಿಸ್ಸೆಗೆ ಹೊಂದುತಂಹ ಸ್ವತ್ತುಗಳು ಮಾರಾಟ ಮಾಡುವ ಸಂದರ್ಭದಲ್ಲಿ ಪ್ರಥಮ ಪ್ರಾಶಸ್ತ್ಯವನ್ನು ಉಳಿದ ಹಿಸ್ಸೆದಾರರು ಪಡೆದುಕೊಂಡು ಒಂದು ವೇಳೆ ಮಾರುಕಟ್ಟೆ ಬೆಲೆಗೆ ಉಳಿದ ಹಿಸ್ಸೆದಾರರು ಖರೀದಿ ಮಾಡದೇ ಇದ್ದಲ್ಲಿ

ಬೇರೆಯವರಿಗೆ ಮಾರಾಟ ಮಾಡಲು ಹಕ್ಕನ್ನು ಹೊಂದಿರುತ್ತಾರೆಂದು ಸ್ಪಷ್ಟವಾಗಿ ನಮೂದಿಸಿರುತ್ತಾರೆ. ಆ ಪ್ರಕಾರ ವಾದಿಯು ತನ್ನ ವಾದ ಪತ್ರದಲ್ಲಿ ಹಾಗೂ ಅವರ ಪರ ವಕೀಲರ ವಾದ ಮಂಡನೆಯಲ್ಲಿ 1 ನೇ ಪ್ರತಿವಾದಿಯು ವಾದಿಯ ಗಮನಕ್ಕೆ ಬಾರದೆ ಮಾರಾಟ ಮಾಡಿರುತ್ತಾರೆಂದು ವಾದಿಸಿರುತ್ತಾರೆ. ಆದರೆ ಪ್ರತಿವಾದಿಯರು ತಮ್ಮ ವಾದ ಮಂಡನೆಯಲ್ಲಿ ಹಾಗೂ ಪ್ರತಿವಾದ ಪತ್ರದಲ್ಲಿ 1 ನೇ ಪ್ರತಿವಾದಿಯು ಊರಿನ ಪಂಚರನ್ನು ಕರೆದುಕೊಂಡು ವಾದಿಯವರನ್ನು ಖುದ್ದಾಗಿ ಬೇಟಿಯಾಗಿ ಸದರಿ ಸ್ವತ್ತನ್ನು ಖರೀದಿಸುವಂತೆ ಕೇಳಿಕೊಂಡಿದ್ದು, ಆದರೆ ವಾದಿಯರು ಉಚಿತವಾಗಿ ಕೊಟ್ಟರೆ ಮಾತ್ರ ತಗೆದುಕೊಳ್ಳುವುದಾಗಿ ಅಥವಾ 20,000/- ರೂಗಳನ್ನು ಕೊಡುತ್ತೇವೆ ಇಲ್ಲವಾದರೆ ಬೇರೆಯವರಿಗೆ ಮಾರಾಟ ಮಾಡಬಹುದು ಎಂದು ಪಂಚರ ಸಮಕ್ಷಮದಲ್ಲಿ ಮೌಖಿಕವಾಗಿ ಹೇಳಿರುತ್ತಾರೆಂದು ವಾದಿಸಿರುತ್ತಾರೆ. ಆದರೆ ಈ ಪ್ರಕರಣದಲ್ಲಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಖರೀದಿ ಕೊಡುವ ಪೂರ್ವದಲ್ಲಿ ವಾದಿಗೆ ದಾವಾ ಆಸ್ತಿಯನ್ನು ಖರೀದಿಸಲು ಕೋರಿಕೊಂಡಿರುತ್ತಾರೆಂದು ಚರ್ಚಿತ ವಿಷಯವಾಗಿರುತ್ತದೆ. ಆದೇ ರೀತಿ ಈ ಪ್ರಕರಣದಲ್ಲಿ ರಾಜೀ ಡಿಕ್ರಿಯನ್ನು ಪರಿಶೀಲಿಸಿದ್ದ ರಾಜೀ ಡಿಕ್ರಿಯಂತೆ ಹಿಸ್ಸೆದಾರರು ಸ್ವತ್ತನ್ನು ಪಡೆದುಕೊಂಡಿರುತ್ತಾರೆಂದು ನಮೂದಿಸಿರುತ್ತಾರೆ. ಆದರೆ ಈ ಪ್ರಕರಣದಲ್ಲಿ ವಾದಿ, 1 ಮತ್ತು 2 ನೇ ಪ್ರತಿವಾದಿಯರ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದು ಇದ್ದರೂ ಸಹ ದಾವಾ ಸ್ವತ್ತನ್ನು ತಾವೇ ಸ್ವಾದೀನಾನುಭವದಲ್ಲಿದ್ದು ಸಾಗುವಳಿ ಮಾಡುತ್ತಾ ಬಂದಿರುತ್ತಾರೆಂದು ವಾದಿಸಿರುತ್ತಾರೆ. ಆದರೆ ಈ ಪ್ರತಿವಾದಿಯರು ದಾವಾ ಆಸ್ತಿಯನ್ನು ತಾವೇ ಸಾಗುವಳಿ ಮಾಡುತ್ತಾ ಬಂದಿರುತ್ತಾರೆಂದು ವಾದಿಸಿರುತ್ತಾರೆ. ಈ ಪ್ರಕರಣದಲ್ಲಿ ವಾದಿ ಮತ್ತು 1 ನೇ ಪ್ರತಿವಾದಿಯ ಅಸಲು ದಾವಾ ನಂ.55/2017 ರಂತೆ ರಾಜೀ ಡಿಕ್ರಿಯಾಗಿ ತಮ್ಮ ಹಿಸ್ಸೆಗೆ ಹೊಂದುವಂತಹ ಸ್ವತ್ತಿಗಳಲ್ಲಿ ಮಾರಾಟ ಮಾಡುವ ಸಂದರ್ಭದಲ್ಲಿ ಪ್ರಥಮ ಪ್ರಾಶಸ್ತ್ಯವನ್ನು ಉಳಿದ ಹಿಸ್ಸೆದಾರರಿಗೆ ನೀಡತಕ್ಕದ್ದು ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ.

16. ಅದೇ ರೀತಿ ಈ ಪ್ರಕರಣದಲ್ಲಿ 1ನೇ ಪ್ರತಿವಾದಿಯು ಪಂಚರ ಸಮಕ್ಷಮದಲ್ಲಿ ವಾದಿಯವರಿಗೆ 2ನೇ ಪ್ರತಿವಾದಿಗೆ ಖರೀದಿ ನೀಡುವ ಪೂರ್ವದಲ್ಲಿ ವಿಷಯವನ್ನು ಪ್ರಸ್ತಾಪಡಿಸಿರುತ್ತಾರೆಂದು ಚರ್ಚಿತ ವಿಷಯವಾಗಿರುತ್ತದೆ ಹಾಗೂ ಸಾಬೀತುಪಡಿಸುವ ಹೊಣಾಗಾರಿಕೆಯು ಪ್ರತಿವಾದಿಯರ ಮೇಲೆ ಇರುತ್ತದೆ. ಅದೇ ರೀತಿ ವಾದಿ ಪ್ರತಿವಾದಿಯರು ಹಾಜರುಪಡಿಸಿದ ಪಹಣಿ ಪತ್ರಿಕೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ್ದಲ್ಲಿ, ಸದರಿ ಪಹಣಿ ಪತ್ರಿಕೆಯು 2025-26 ನೇ ಸಾಲಿನ ಪತ್ರಿಕೆಯಾಗಿದ್ದು ಅದರಲ್ಲಿ ಕಲಂ 12(9) ರ ಬೆಳೆಯ ಪ್ರಕಾರ ಪಡೆದಿದ್ದು ಇರುತ್ತದೆಂದು ನಮೂದಿಸಿರುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ಯಾರು ಸ್ವಾದೀನಾನುಭವದಲ್ಲಿರುತ್ತಾರೆ ಹಾಗೂ ಬೆಳೆಯನ್ನು ಬೆಳೆದಿರುತ್ತಾರೆ ಎಂಬ ಬಗ್ಗೆ ಸಹ ಚರ್ಚಿತದ ವಿಷಯವಾಗಿರುತ್ತದೆ. ಈ ಹಂತದಲ್ಲಿ ಕೇವಲ ರಾಜೀ ಡಿಕ್ರಿಯಂತೆ ಮಾರಾಟ ಮಾಡುವ ಪೂರ್ವದಲ್ಲಿ ವಾದಿಗೆ ಪ್ರಥಮ ಪ್ರಾಶಸ್ತ್ಯವನ್ನು ನೀಡಬೇಕೆಂದು ಷರತ್ತುಗಳು ಇದ್ದರೂ ಸಹ ಈ ಮದ್ಯಂತರ ಅರ್ಜಿ ನಂ.1 ನ್ನು ಪುರಸ್ಕರಿಸಿ ತಾತ್ಕಾಲಿಕ ನಿರ್ಬಂದಕಾಜ್ಞೆ ನೀಡಿದ್ದಲ್ಲಿ ವಾದಿಗಿಂತ 2ನೇ ಪ್ರತಿವಾದಿಗೆ ಹೆಚ್ಚಿನ ಹಾನಿ ನಷ್ಟ ಉಂಟಾಗುವ ಸಾದ್ಯತೆ ಇರುವುದನ್ನು ಪರಿಗಣಿಸಿ ಸದರಿ ವಾದಿಯು ತನ್ನ ಪರ ಮೇಲ್ನೋಟದ ದಾವೆ ಹಾಗೂ ಅನುಕೂಲತೆ ಒಲವು ಇಲ್ಲವೆಂದು ಅಬಿಪ್ರಾಯಪಡುತ್ತೇನೆ. ಅದೇ ರೀತಿ ಈ ಮದ್ಯಂತರ ಅರ್ಜಿ ನಂ.1ನ್ನು ಪುರಸ್ಕರಿಸಿದ್ದಲ್ಲಿ ವಾದಿಗಿಂತ 2ನೇ ಪ್ರತಿವಾದಿಗೆ ಹೆಚ್ಚಿನ ಹಾನಿ ನಷ್ಟ ಉಂಟಾಗುವ ಸಾದ್ಯತೆ ಇರುವುದನ್ನು ಅಬಿಪ್ರಾಯಪಟ್ಟು ಮೇಲಿನ ಅಂಶಗಳು **1 ರಿಂದ 3 ಅನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**17 ಅಂಶ 4ಃ** ಅಂಶಗಳು 1ರಿಂದ 3ರಲ್ಲಿನ ಚರ್ಚೆಯಿಂದ ಬಂದಂತ ಉತ್ತರದಿಂದಾಗಿ, ಈ ಕೆಳಕಂಡಂತೆಃ

**ಆದೇಶ**

ವಾದಿಯು ಸಿವಿಲ್ ಪ್ರಕ್ರಿಯೆ ಸಂಹಿತೆ ಕ್ರಮ
ಆದೇಶ XXXIX ನಿಯಮ 1 ಮತ್ತು 2 ರ ಅಡಿಯಲ್ಲಿ

ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ I ಅನ್ನು ತಿರಸ್ಕರಿಸಲಾಗಿದೆ

ವೆಚ್ಚಗಳ ಬಗ್ಗೆ ಯಾವುದೇ ಆದೇಶ ಇಲ್ಲ.

*(ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರರರಿಗೆ ಕೊಟ್ಟು ಅದನ್ನು ಅವರಿಂದ ಬೆರಳಚ್ಚುಪಡಿಸಿ ಗಣಕೀಕೃತಗೊಳಿಸಿದ್ದು, ನಂತರ ತಿದ್ದುಪಡಿ ಮಾಡಿ, ಸಹಿ ಮಾಡಿ ಇಂದು ಅಂದರೆ 17ನೇ ಜುಲೈ , 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)*

**(ರಾಜು. ಕೃ .ಶೇಡಬಾಳ್‍ಕರ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಸೊರಬ.